ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ನಾವು ನ್ಯಾಯಾಂಗ ತನಿಖೆಗೆ ಇನ್‌ಸಿಸ್ಟ್ ಮಾಡುತ್ತಿದ್ದೇವೆ. ಏಕೆಂದರೆ ಇವತ್ತು ಲೋಕಾಯುಕ್ತರು ಸಂಪೂರ್ಣವಾಗಿ ಎನ್‌ಕ್ವೈರಿ ಮಾಡುವುದಕ್ಕಾಗುವುದಿಲ್ಲ ಎನ್ನುವುದೇ ನಮ್ಮ ಸ್ಟ್ರಾಂಡ್ ಇದೆ. ಇದು ಬಹಳ ಮುಖ್ಯವಾದುದು. ಡಾಕ್ಟರ್ ಸುದರ್ಶನ್ ರವರದ್ದು ಕಾಂಟ್ರವರ್ಷಿಯಲ್ ಸ್ಟೇಟ್‌ಮೆಂಟ್ ಬಂದಿದೆ. ಮತ್ತು ಒಬ್ಬ ಮಂತ್ರಿಗಳ ಹೆಸರು ಬಂದಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳ ಜವಾಬ್ದಾರಿಯು ಇದರಲ್ಲಿದೆ. ಹೀಗಾಗಿ ಕಳೆದ ಹಲವಾರು ವರ್ಷಗಳಿಂದ ಹಗರಣ ನಡೆಯುತ್ತಾ ಬಂದಿದೆ. 300 ಕೋಟಿ ರೂಪಾಯಿಗಳದ್ದು ಅದಕ್ಕೆ ನ್ಯಾಯಾಂಗ ತನಿಖೆಯನ್ನು ಇನ್‌ಸಿಸ್ಟ್ ಮಾಡುತ್ತಿದ್ದೇವೆ. ಸರ್ಕಾರ ಅದಕ್ಕೆ ಒಪ್ಪಬೇಕಾಗುತ್ತದೆ.

ಅಧ್ಯಕ್ಷರು :- ಅವರು ಒಪ್ಪುವುದಕ್ಕಾಗುವುದಿಲ್ಲವೆಂದು ಹೇಳಿದರಲ್ಲಾ ಮಾನ್ಯ ಕಾಗೋಡು ತಿಮ್ಮಪ್ಪನವರು.

ಶ್ರೀ ಜಗದೀಶ್ ಶೆಟ್ಟರ್ :- ಹಾಗಾದರೆ ಈ ಹಗರಣವನ್ನು ಮುಚ್ಚಿ ಹಾಕಲಿಕ್ಕೆ ಹೊರಟಿದ್ದಾರೆ ಶ್ರೀ ಆರಗ ಜ್ಞಾನೇಂದ್ರ ನ್ಯಾಯಾಂಗ ತನಿಖೆ ನಡೆಸಲು ಏತಕ್ಕಾಗಿ ಹೆದರುತ್ತಾರೆ?..... (ಬಿಜೆಪಿ ಪಕ್ಷದ ಎಲ್ಲಾ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡಲು ಪ್ರಾರಂಭಿಸಿದರು)

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಸಿ.ಎಂ.ಸಿ ಹಗರಣವನ್ನು ಯಾವ ರೀತಿ ಮುಚ್ಚಿ ಹಾಕಿದ್ದಾರೆ ಅದೇ ರೀತಿ ಈ ಹಗರಣವನ್ನು ಮುಚ್ಚಿ ಹಾಕುತ್ತಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ :- ನ್ಯಾಯಾಂಗ ತನಿಖೆಗೆ ನೀವು ಹೆದರುವುದು ಏಕೆ?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೇ, ಹಗರಣವನ್ನು ಮುಚ್ಚಿ ಹಾಕಲು ನನಗೆ ಅವರು ಯಾರೂ ನಮ್ಮ ಸೋದರ ಮಾವನ ಮಕ್ಕಳಲ್ಲ. ಯಾವೋನು ಇದ್ದರೂ ಒಳಗೆ ಹಾಕುತ್ತೇನೆ. ತಿಳಿದುಕೊಳ್ಳಿ. ನಾವು ಬಹಳ ಪ್ರಾಮಾಣಿಕರರಾಗಿದ್ದೇವೆ. ಏನು ಮುಚ್ಚಿ ಹಾಕುವುದು? ಏನು ಮುಚ್ಚಿ ಹಾಕುವುದು? ಏಕೆ ಮುಚ್ಚಿ ಹಾಕಬೇಕು?

Sri Jagadish Shettar :- We inssist for Judicial enquiry..

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ :- ಬ್ಲಾಕ್‌ಲಿಸ್ಟ್‌ನಲ್ಲಿ ಇರುವಂತಹ ಕಂಪನಿಗಳಿಂದಲೂ ಪರ್ಚೇಸ್ ಮಾಡಿದ್ದಾರೆ ಅದ್ದರಿಂದ ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳಿ....

(ಈ ಹಂತದಲ್ಲಿ ನ್ಯಾಯಾಂಗ ತನಿಖೆ ಆಗಲೇಬೇಕೆಂದು ಒತ್ತಾಯಿಸಿ ಬಿಜೆಪಿ ಪಕ್ಷದ ಸದಸ್ಯರು ಸದನದ ಬಾವಿಗೆ ಧರಣಿ ಮಾಡಿದರು)

ಅಧ್ಯಕ್ಷರು :- ಡಾ।। ರೆಡ್ಡಿಯವರು ಮಾತನಾಡಲು ಅವಕಾಶ ಕೇಳಿದ್ದಾರೆ, ಅವರು ಮಾತನಾಡಲಿ.

ಡಾ।। ಎ.ಬಿ. ಮಾಲಕರೆಡ್ಡಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ನಾಯಕರು ಏನು ಹೇಳಿದರು ಆ ಪಾಯಿಂಟ್‌ಗೆ ನಾನು ಕ್ಲಾರಿಫೈ ಮಾಡಲಿಲ್ಲ. ಏಕೆಂದರೆ ಟಿವಿಯಲ್ಲಿ ಮತ್ತು ಎಲೆಕ್ಟ್ರಾನಿಕ್ ಮೀಡಿಯದಲ್ಲಿ ಕೂಡ ಹಾಗೆಯೇ ಬಂತು. ದಯವಿಟ್ಟು ಈ ವಿಷಯ ಸ್ವಲ್ಪ